ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	228 (266)
ಸದಸ್ಯರ ಹೆಸರು	:	ಶ್ರೀ ಹೆಚ್.ಎಂ. ರಮೇಶ ಗೌಡ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ	:	14-09-2021
ಉತ್ತರಿಸುವ ಸಚಿವರು	:	ಮಾನ್ಯ ಪೌರಾಡಳಿತ, ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	2019-20 ಹಾಗೂ 2020-21ನೇ ಸಾಲಿನಲ್ಲಿ ಪುರಸಭೆ ಹಾಗೂ ಪಟ್ಟಣ ಪಂಚಾಯಿತಿಗೆ ನೀಡುವ ಎಸ್.ಎಫ್.ಸಿ ವಿಶೇಷ ಅನುದಾನದ ಅನುಮೋದನೆಗಾಗಿ ನಗರಾಭಿವೃದ್ಧಿ ಇಲಾಖೆಯಿಂದ ಆರ್ಥಿಕ ಇಲಾಖೆಗೆ ಪ್ರಸ್ತಾವನೆಗಳು/ ಕಡತಗಳು ಬಂದಿದೆಯೇ; ಹಾಗಿದ್ದಲ್ಲಿ, ಎಷ್ಟು ಪ್ರಸ್ತಾವನೆಗಳು / ಕಡತಗಳು ಬಂದಿರುತ್ತವೆ; ಅವು ಯಾವುವು; ಅದರಲ್ಲಿ ಅನುಮೋದನೆಗೊಂಡ ಪ್ರಸ್ತಾವನೆಗಳು / ಕಡತಗಳು ಹಾಗೂ ಅನುಮೋದನೆಗೊಳ್ಳದೆ ತಡೆಹಿಡಿಯಲಾದ ಪ್ರಸ್ತಾವನೆಗಳು / ಕಡತಗಳು ಯಾವುವು; (ಸಂಪೂರ್ಣ ವಿವರ ನೀಡುವುದು)	ರಾಜ್ಯದ ವಿವಿಧ ನಗರ ಸ್ಥಳೀಯ ಸಂಸ್ಥೆಗಳಿಂದ 2019-20 ಹಾಗೂ 2020-21ನೇ ಸಾಲಿನಲ್ಲಿ ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗೆ ನೀಡುವ ವಿಶೇಷ ಅನುದಾನ ಮಂಜೂರಾತಿಗಾಗಿ ಒಟ್ಟು 26 ಪ್ರಸ್ತಾವನೆಗಳು ಸ್ವೀಕೃತವಾಗಿರುತ್ತದೆ. ಈ ಪೈಕಿ 05 ಪ್ರಸ್ತಾವನೆಗಳು ಅನುಮೋದನೆಯಾಗಿರುವುದಿಲ್ಲ. ಸದರಿ ಅವಧಿಯಲ್ಲಿ ವಿಶೇಷ ಅನುದಾನ ಮಂಜೂರಾತಿ ಕೋರಿ ಸರ್ಕಾರಕ್ಕೆ ನೇರವಾಗಿ ಸಲ್ಲಿಸಲಾಗಿರುವ 17 ಪ್ರಸ್ತಾವನೆಗಳು ಅನುಮೋದನೆಗೊಂಡಿರುವುದಿಲ್ಲ. (ವಿವರವನ್ನು ಅನುಬಂಧದಲ್ಲಿ ಲಗತ್ತಿಸಿದೆ)
ಆ)	ಎಸ್.ಎಫ್.ಸಿ ವಿಶೇಷ ಅನುದಾನದ ಪ್ರಸ್ತಾವನೆಗಳು / ಕಡತಗಳು ಅನುಮೋದನೆಗೊಳಿಸದೇ ತಡೆಹಿಡಿಯಲು ಕಾರಣಗಳೇನು; ಯಾವ ಕಾಲಮಿತಿಯಲ್ಲಿ ಅನುಮೋದನೆ ನೀಡಲಾಗುವುದು; (ವಿವರ ನೀಡುವುದು)	ಸರ್ಕಾರವು ವಿಶೇಷ ಅನುದಾನ ಪ್ರಸ್ತಾವನೆಗಳು/ ಕಡತಗಳನ್ನು ಅನುಮೋದನೆಗೊಳಿಸದೇ ತಡೆಹಿಡಿಯಲು ಕಾರಣಗಳು : 1) ಕೋವಿಡ್ ಲಾಕಡೌನ್ ಹಿನ್ನೆಲೆಯಲ್ಲಿ ಆರ್ಥಿಕ ಪರಿಸ್ಥಿತಿ ಉತ್ತಮವಾಗಿಲ್ಲದಿರುವುದರಿಂದ. 2) ಕೋವಿಡ್-19 ವೈರಾಣು ಸೋಂಕಿನ ಹಿನ್ನೆಲೆಯಲ್ಲಿ ನಿರೀಕ್ಷಿತ ಮಟ್ಟದಲ್ಲಿ ರಾಜಸ್ವ ಸಂಗ್ರಹಣೆ ಆಗುತ್ತಿಲ್ಲವಾದ್ದರಿಂದ. 3) ವಿಶೇಷ ಅನುದಾನ ತೀವ್ರ ಕೊರತೆಯಲ್ಲಿರುವುದರಿಂದ. ಎಸ್.ಎಫ್.ಸಿ ವಿಶೇಷ ಅನುದಾನದ ಪ್ರಸ್ತಾವನೆಗಳ ಕುರಿತಂತೆ ಆರ್ಥಿಕ ಇಲಾಖೆಯ ನಿರ್ದೇಶನದಂತೆ, ಕ್ರಮವಹಿಸಲಾಗುವುದು.
ಇ)	ಎಸ್.ಎಫ್.ಸಿ ವಿಶೇಷ ಅನುದಾನದ ಹೆಚ್ಚಿನ ಪ್ರಸ್ತಾವನೆಗಳು ಕಡತಗಳು ಅನುಮೋದನೆ ಮಾಡಲಾಗಿದ್ದು, ಕೆಲವು ಪ್ರಸ್ತಾವನೆಗಳು ಕಡತಗಳು ಅನುಮೋದನೆಗೊಳಿಸದೆ ಕೋವಿಡ್ ಕಾರಣದಿಂದ ಅನುದಾನದ ಲಭ್ಯತೆ ಇಲ್ಲವೆನ್ನುವ ಕಾರಣ ನೀಡಿ ತಡೆಹಿಡಿದು, ಅನುಮೋದನೆ ಮಾಡಲು ತಾರತಮ್ಯ ತೋರಿಸುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ತಾರತಮ್ಯ ಸರಿಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು)	ಎಸ್.ಎಫ್.ಸಿ ವಿಶೇಷ ಅನುದಾನದ ಪ್ರಸ್ತಾವನೆಗಳಿಗೆ ಸಂಬಂಧಪಟ್ಟಂತೆ ಆರ್ಥಿಕ ಇಲಾಖೆಯ ನಿರ್ದೇಶನದಂತೆ ಕ್ರಮವಹಿಸಲಾಗುತ್ತಿದ್ದು, ಎಸ್.ಎಫ್.ಸಿ. ವಿಶೇಷ ಅನುದಾನವಲ್ಲದೇ ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ವಿವಿಧ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಎಸ್.ಎಫ್.ಸಿ ಮುಕ್ತನಿಧಿ ಅನುದಾನ, ಎಸ್.ಎಫ್.ಸಿ ಕುಡಿಯುವ ನೀರು ಅನುದಾನ, ನಗರೋತ್ಥಾನ ಹಾಗೂ 15ನೇ ಹಣಕಾಸು ಆಯೋಗ ಅನುದಾನಗಳನ್ನು ಒದಗಿಸಲಾಗುತ್ತಿದೆ.

ಕಡತ ಸಂಖ್ಯೆ:ನಅಇ 353 ಎಸ್‌ಎಫ್‌ಸಿ 2021

[ಎನ್. ನಾಗರಾಜ್ (ಎಂ.ಟಿ.ಬಿ)]
ಪೌರಾಡಳಿತ, ಸಣ್ಣ ಕೈಗಾರಿಕೆ ಹಾಗೂ
ಸಾರ್ವಜನಿಕ ವಲಯ ಉದ್ಯಮಗಳ ಸಚಿವರು

ಅನುಬಂಧ

2019-20 ಹಾಗೂ 2020-21ನೇ ಸಾಲಿನಲ್ಲಿ ಪುರಸಭೆ ಹಾಗೂ ಪಟ್ಟಣ ಪಂಚಾಯಿತಿಗೆ ವಿಶೇಷ ಅನುದಾನ ಅನುಮೋದನೆ ಕೋರಿ ನಿರ್ದೇಶನಾಲಯಕ್ಕೆ ಸ್ವೀಕೃತವಾಗಿ ಸರ್ಕಾರಕ್ಕೆ ಅನುದಾನ ಮಂಜೂರಾತಿ ಕೋರಿ ಸಲ್ಲಿಸಲಾಗಿರುವ ಪ್ರಸ್ತಾವನೆಗಳ ವಿವರ

ಕ್ರ.ಸಂ	ವಿಷಯ	ಅನುದಾನ ಮಂಜೂರಾತಿ ಕೋರಿರುವವರು	ಕೋರಿರುವ ಮೊತ್ತ
01	ಕುಣಿಗಲ್ ಪಟ್ಟಣದಲ್ಲಿ ಖಾಸಗಿ ಬಸ್ ನಿಲ್ದಾಣದಲ್ಲಿ ಬಸ್ ನಿಲ್ದಾಣ ಮತ್ತು ವಾಣಿಜ್ಯ ಸಂಕೀರ್ಣ ನಿರ್ಮಿಸಲು ಅನುದಾನ ಮಂಜೂರು ಮಾಡಲು ಕೋರಿ	ಜಿಲ್ಲಾಧಿಕಾರಿಗಳು. ತುಮಕೂರು ಜಿಲ್ಲೆ	ರೂ 600.00 ಲಕ್ಷಗಳು
02	ಜಗಳೂರು ಪಟ್ಟಣ ಪಂಚಾಯಿತಿ ಅಭಿವೃದ್ಧಿಗೆ ವಿಶೇಷ ಅನುದಾನ ಮಂಜೂರು ಮಾಡಲು ಕೋರಿ	ಜಿಲ್ಲಾಧಿಕಾರಿಗಳು. ದಾವಣಗೆರೆ ಜಿಲ್ಲೆ	ರೂ 1524.00 ಲಕ್ಷಗಳು
03	ಪಾವಗಡ ಪುರಸಭೆ ವ್ಯಾಪ್ತಿಯಲ್ಲಿ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ವಿಶೇಷ ಅನುದಾನ ಮಂಜೂರು ಮಾಡಲು ಕೋರಿ	ಮಾನ್ಯ ಶಾಸಕರು. ಪಾವಗಡ ವಿಧಾನಸಭಾ ಕ್ಷೇತ್ರ	ರೂ 200.00 ಲಕ್ಷಗಳು
04	ಜಗಳೂರು ಪಟ್ಟಣ ಅಭಿವೃದ್ಧಿಗಾಗಿ ವಿಶೇಷ ಅನುದಾನ ಮಂಜೂರು ಮಾಡಲು ಕೋರಿ	ಜಿಲ್ಲಾಧಿಕಾರಿಗಳು. ದಾವಣಗೆರೆ ಜಿಲ್ಲೆ	ರೂ 1524.00 ಲಕ್ಷಗಳು
05	ಬೀಳಗಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ವಿಶೇಷ ಅನುದಾನ ಮಂಜೂರು ಮಾಡಲು ಕೋರಿ	ಮಾನ್ಯ ಶಾಸಕರು. ಬೀಳಗಿ ವಿಧಾನಸಭಾ ಕ್ಷೇತ್ರ	ರೂ 531.00 ಲಕ್ಷಗಳು
06	ನವಲಗುಂದ ಪುರಸಭೆ ಹಾಗೂ ಅಣ್ಣಿಗೇರಿ ಪುರಸಭೆಗಳ ವ್ಯಾಪ್ತಿಯಲ್ಲಿ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ವಿಶೇಷ ಅನುದಾನ ಮಂಜೂರು ಮಾಡಲು ಕೋರಿ	ಮಾನ್ಯ ಶಾಸಕರು. ನವಲಗುಂದ ವಿಧಾನಸಭಾ ಕ್ಷೇತ್ರ	ರೂ 1200.00 ಲಕ್ಷಗಳು
07	ಕುಂದಗೋಳ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ವಿಶೇಷ ಅನುದಾನ ಮಂಜೂರು ಮಾಡಲು ಕೋರಿ	ಮಾನ್ಯ ಶಾಸಕರು. ಕುಂದಗೋಳ ವಿಧಾನಸಭಾ ಕ್ಷೇತ್ರ	ರೂ 1000.00 ಲಕ್ಷಗಳು
08	ಖಾನಾಪುರ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ವಿಶೇಷ ಅನುದಾನ ಮಂಜೂರು ಮಾಡಲು ಕೋರಿ	ಮಾನ್ಯ ಶಾಸಕರು. ಖಾನಾಪುರ ವಿಧಾನಸಭಾ ಕ್ಷೇತ್ರ	ರೂ 1000.00 ಲಕ್ಷಗಳು
09	ತಾಳಿಕೋಟೆ ಪುರಸಭೆ ಮತ್ತು ಮುದ್ದೇಬಿಹಾಳ್ ಪುರಸಭೆ ವ್ಯಾಪ್ತಿಯಲ್ಲಿ ಖಾಲಿ ನಿವೇಶನದಲ್ಲಿ ವಾಣಿಜ್ಯ ಮಳಿಗೆ ಸಂಕೀರ್ಣ ನಿರ್ಮಿಸಲು ವಿಶೇಷ ಅನುದಾನ ಮಂಜೂರು ಮಾಡಲು ಕೋರಿ	ಮಾನ್ಯ ಶಾಸಕರು. ಮುದ್ದೇಬಿಹಾಳ ವಿಧಾನಸಭಾ ಕ್ಷೇತ್ರ	ರೂ 4000.00 ಲಕ್ಷಗಳು
10	ಕೆ.ಆರ್.ಪೇಟೆ ಪುರಸಭೆ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ವಿಶೇಷ ಅನುದಾನ ಮಂಜೂರು ಮಾಡಲು ಕೋರಿ	ಮಾನ್ಯ ಶಾಸಕರು. ಕೆ.ಆರ್.ಪೇಟೆ ವಿಧಾನಸಭಾ ಕ್ಷೇತ್ರ	ರೂ 6000.00 ಲಕ್ಷಗಳು
11	ಹೊಳೆನರಸೀಪುರ ಪುರಸಭೆ ವ್ಯಾಪ್ತಿಯಲ್ಲಿ ಮಳೆಯಿಂದಾಗಿ ಹಾನಿಯಾಗಿರುವ ಮೂಲಭೂತ ಸೌಕರ್ಯಗಳನ್ನು ಪುನರ್ ಕಲ್ಪಿಸಲು ವಿಶೇಷ ಅನುದಾನ ಮಂಜೂರು ಮಾಡಲು ಕೋರಿ	ಜಿಲ್ಲಾಧಿಕಾರಿಗಳು. ಹಾಸನ ಜಿಲ್ಲೆ	ರೂ 433.00 ಲಕ್ಷಗಳು
12	ಮುಲ್ಕಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಮಳೆಯಿಂದಾಗಿ ಹಾನಿಯಾಗಿರುವ ಮೂಲಭೂತ ಸೌಕರ್ಯಗಳನ್ನು ಪುನರ್ ಕಲ್ಪಿಸಲು ವಿಶೇಷ ಅನುದಾನ ಮಂಜೂರು ಮಾಡಲು ಕೋರಿ	ಮಾನ್ಯ ಶಾಸಕರು. ಮುಲ್ಕಿ-ಮೂಡಬಿದಿರೆ ವಿಧಾನಸಭಾ ಕ್ಷೇತ್ರ	ರೂ 200.00 ಲಕ್ಷಗಳು
13	ಮೂಡಬಿದಿರೆ ಪುರಸಭೆ ವ್ಯಾಪ್ತಿಯಲ್ಲಿ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ವಿಶೇಷ ಅನುದಾನ ಮಂಜೂರು ಮಾಡಲು ಕೋರಿ	ಮಾನ್ಯ ಶಾಸಕರು. ಮುಲ್ಕಿ-ಮೂಡಬಿದಿರೆ ವಿಧಾನಸಭಾ ಕ್ಷೇತ್ರ	ರೂ 400.00 ಲಕ್ಷಗಳು
14	ಶಿಕಾರಿಪುರ ಪುರಸಭೆ ವಾರ್ಡ್ ಸಂಖ್ಯೆ 10ರಲ್ಲಿನ ದೊಡ್ಡಕೇರಿ ರಸ್ತೆಯಲ್ಲಿ ಯು.ಜಿ ಕೇಬಲ್. ಬೀದಿದೀಪ ಅಕ್ಟಾಗನಲ್ ಕಂಬ ಮತ್ತು ಇಂಟರ್‌ಲಾಕ್ ಪೇವಿಂಗ್ ಅಳವಡಿಸಲು ವಿಶೇಷ ಅನುದಾನ ಮಂಜೂರು ಮಾಡಲು ಕೋರಿ	ಜಿಲ್ಲಾಧಿಕಾರಿಗಳು. ಶಿವಮೊಗ್ಗ ಜಿಲ್ಲೆ	ರೂ 116.35 ಲಕ್ಷಗಳು
15	ತುರುವೇಕೆರೆ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ವಾಣಿಜ್ಯ ಸಂಕೀರ್ಣ ಕಟ್ಟಡದ ಮುಂದುವರೆದ ಕಾಮಗಾರಿಗೆ ವಿಶೇಷ ಅನುದಾನ ಮಂಜೂರು ಮಾಡುವ ಬಗ್ಗೆ	ಮಾನ್ಯ ಶಾಸಕರು. ತುರುವೇಕೆರೆ ವಿಧಾನಸಭಾ ಕ್ಷೇತ್ರ	ರೂ 200.00 ಲಕ್ಷಗಳು

16	ಕಮಲಾಪೂರ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ವಿಶೇಷ ಅನುದಾನ ಮಂಜೂರು ಮಾಡುವ ಬಗ್ಗೆ.	ಮಾನ್ಯ ಶಾಸಕರು. ಕಲಬುರಗಿ ಗ್ರಾಮೀಣ ವಿಧಾನಸಭಾ ಕ್ಷೇತ್ರ	ರೂ 1000.00 ಲಕ್ಷಗಳು -
17	ಮಲೇಬೆನ್ನೂರು ಪುರಸಭಾ ವ್ಯಾಪ್ತಿಯಲ್ಲಿನ ಗಾಂಧಿ ಭವನವನ್ನು ಮರು ನಿರ್ಮಾಣ ಮಾಡಲು ವಿಶೇಷ ಅನುದಾನ ಮಂಜೂರು ಮಾಡುವ ಬಗ್ಗೆ	ಜಿಲ್ಲಾಧಿಕಾರಿಗಳು. ದಾವಣಗೆರೆ ಜಿಲ್ಲೆ	ರೂ 67.00 ಲಕ್ಷಗಳು
18	ಹೊಸದುರ್ಗ ಪುರಸಭೆಗೆ ವಾಣಿ ವಿಲಾಸ ಜಲಾಶಯದಿಂದ ಹಿನ್ನೀರಿನಿಂದ ಶಾಶ್ವತ ಕುಡಿಯುವ ನೀರು ಸರಬರಾಜು ಮಾಡಲು ವಿಶೇಷ ಅನುದಾನ ಮಂಜೂರು ಮಾಡುವ ಬಗ್ಗೆ	ಮಾನ್ಯ ಶಾಸಕರು. ಹೊಸದುರ್ಗ ವಿಧಾನಸಭಾ ಕ್ಷೇತ್ರ	ರೂ 10000.00 ಲಕ್ಷಗಳು
19	ಶಿಕಾರಿಪುರ ಪುರಸಭೆ ವ್ಯಾಪ್ತಿಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ವಿಶೇಷ ಅನುದಾನ ಮಂಜೂರು ಮಾಡುವ ಬಗ್ಗೆ	ಮಾನ್ಯ ಲೋಕಸಭಾ ಸದಸ್ಯರು	ರೂ 2364.00 ಲಕ್ಷಗಳು
20	ಕುಮಟಾ ಪುರಸಭೆ ವ್ಯಾಪ್ತಿಯ ಚಿತ್ರಗಿ ಗ್ರಾಮದ ಗುಂದ ಮಜರೆಗೆ ಹೊಸ ರಸ್ತೆ ನಿರ್ಮಾಣಕ್ಕಾಗಿ ವಿಶೇಷ ಅನುದಾಣ ಮಂಜೂರು ಮಾಡುವ ಬಗ್ಗೆ	ಮಾನ್ಯ ಶಾಸರು. ಕುಮಟಾ-ಹೊನ್ನಾವರ ವಿಧಾನಸಭಾ ಕ್ಷೇತ್ರ	ರೂ 135.00 ಲಕ್ಷಗಳು
21	ತಿಕೋಟಾ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ವಿಶೇಷ ಅನುದಾನ ಮಂಜೂರು ಮಾಡುವ ಬಗ್ಗೆ	ಮಾನ್ಯ ಶಾಸಕರು. ಬಬಲೇಶ್ವರ್ ವಿಧಾನಸಭಾ ಕ್ಷೇತ್ರ	ರೂ 600.00 ಲಕ್ಷಗಳು

ವಿಶೇಷ ಅನುದಾನ ಮಂಜೂರಾತಿ ಕೋರಿ ನೇರವಾಗಿ ಸರ್ಕಾರಕ್ಕೆ ಸಲ್ಲಿಸಲಾಗಿದ್ದ ಪ್ರಸ್ತಾವನೆಗಳನ್ನು ಹಿಂದಿರುಗಿಸಿರುವ ಪ್ರಸ್ತಾವನೆಗಳ ವಿವರ

ಕ್ರ.ಸಂ	ವಿಷಯ	ಅನುದಾನ ಮಂಜೂರಾತಿ ಕೋರಿರುವವರು	ಕೋರಿರುವ ಮೊತ್ತ
1	ಸದಲಗಾ ಮತ್ತು ಎಕ್ಸಂಬಾ ಪಟ್ಟಣ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ವಿಶೇಷ ಅನುದಾನ ಮಂಜೂರು ಮಾಡಲು ಕೋರಿ	ಮಾನ್ಯ ಶಾಸಕರು. ಚಿಕ್ಕೋಡಿ ವಿಧಾನಸಭಾ ಕ್ಷೇತ್ರ	ರೂ 500.00 ಲಕ್ಷಗಳು
2	ಬೋರಗಾಂವ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ವಿಶೇಷ ಅನುದಾನ ಮಂಜೂರು ಮಾಡಲು ಕೋರಿ	ಮಾನ್ಯ ಶಾಸಕರು. ನಿಪ್ಪಾಣಿ ವಿಧಾನಸಭಾ ಕ್ಷೇತ್ರ	ರೂ 500.00 ಲಕ್ಷಗಳು
3	ತೆಕ್ಕಲಕೋಟೆ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ವಿಶೇಷ ಅನುದಾನ ಮಂಜೂರು ಮಾಡುವ ಬಗ್ಗೆ.	ಮಾನ್ಯ ಶಾಸಕರು. ಸಿರಗುಪ್ಪ ವಿಧಾನಸಭಾ ಕ್ಷೇತ್ರ	ರೂ 500.00 ಲಕ್ಷಗಳು
4	ಕುರುಗೋಡು ಮತ್ತು ಕಂಪ್ಲಿ ಪುರಸಭೆಗೆ ವಿಶೇಷ ಅನುದಾನ ಮಂಜೂರು ಮಾಡುವ ಬಗ್ಗೆ	ಮಾನ್ಯ ಶಾಸಕರು. ಕಂಪ್ಲಿ ವಿಧಾನಸಭಾ ಕ್ಷೇತ್ರ	ರೂ 1000.00 ಲಕ್ಷಗಳು
5	ಕಾರಟಗಿ ಪುರಸಭೆ ಹಾಗೂ ಕನಕಗಿರಿ ಪಟ್ಟಣ ಪಂಚಾಯಿತಿಗಳಿಗೆ ವಿಶೇಷ ಅನುದಾನ ಮಂಜೂರು ಮಾಡುವ ಬಗ್ಗೆ	ಮಾನ್ಯ ಶಾಸಕರು. ಕನಕಗಿರಿ ವಿಧಾನಸಭಾ ಕ್ಷೇತ್ರ	ರೂ 400.00 ಲಕ್ಷಗಳು
6	ಸಕಲೇಶಪುರ ಪುರಸಭೆ ವ್ಯಾಪ್ತಿಯ ವಾರ್ಡ್ ಸಂಖ್ಯೆ 3.6.7.8.11.14.17 ಹಾಗೂ 20ಕ್ಕೆ ಮೂಲಭೂತ ಸೌಕರ್ಯ ಒದಗಿಸಲು ವಿಶೇಷ ಅನುದಾನ ಮಂಜೂರು ಮಾಡುವ ಬಗ್ಗೆ	ಮಾನ್ಯ ಶಾಸಕರು. ಆಲೂರು-ಸಕಲೇಶಪುರ ವಿಧಾನಸಭಾ ಕ್ಷೇತ್ರ	
7	ಮೂಡಬಿದರೆ ಪುರಸಭೆ ಮತ್ತು ಮುಲ್ಕಿ ಪಟ್ಟಣ ಪಂಚಾಯಿತಿ ವ್ಯಾಪ್ತಿಗಳಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ವಿಶೇಷ ಅನುದಾನ ಮಂಜೂರು ಮಾಡುವ ಬಗ್ಗೆ.	ಮಾನ್ಯ ಪೌರಾಡಳಿತ ಸಚಿವರು	ರೂ 1000.00 ಲಕ್ಷಗಳು
8	ಮಾಗಡಿ ಪುರಸಭೆ ವ್ಯಾಪ್ತಿಯ ವಾರ್ಡ್ ಸಂಖ್ಯೆ:1 ಮತ್ತು 9ರ ಶ್ರೀ ರಂಗ ಕಾಲೋನಿಯಲ್ಲಿ ಡೆಕ್ ಸ್ಲ್ಯಾಬ್ ನಿರ್ಮಾಣ. ರಸ್ತೆ ಚರಂಡಿ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲು ವಿಶೇಷ ಅನುದಾನ ಮಂಜೂರು ಮಾಡುವ ಬಗ್ಗೆ	ಮಾನ್ಯ ಪೌರಾಡಳಿತ. ತೋಟಗಾರಿಕೆ ಹಾಗೂ ರೇಷ್ಮೆ ಸಚಿವರು	ರೂ 100.00 ಲಕ್ಷಗಳು
9	ತುರುವೇಕೆರೆ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ವಿಶೇಷ ಅನುದಾನ ಮಂಜೂರು ಮಾಡುವ ಬಗ್ಗೆ.	ಮಾನ್ಯ ಶಾಸಕರು. ತುರುವೇಕೆರೆ ವಿಧಾನಸಭಾ ಕ್ಷೇತ್ರ	ರೂ 300.00 ಲಕ್ಷಗಳು

10	ಹೊಸದುರ್ಗ ಪುರಸಭೆ ವ್ಯಾಪ್ತಿಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ವಿಶೇಷ ಅನುದಾನ ಮಂಜೂರು ಮಾಡುವ ಬಗ್ಗೆ.	ಮಾನ್ಯ ಪೌರಾಡಳಿತ. ತೋಟಗಾರಿಕೆ ಹಾಗೂ ರೇಷ್ಮೆ ಸಚಿವರು	ರೂ 1000.00 ಲಕ್ಷಗಳು
	ಖಾನಾಪೂರ ಪಟ್ಟಣ ಪಂಚಾಯಿತಿಯ ಸಮಗ್ರ ಅಭಿವೃದ್ಧಿಗಾಗಿ ವಿಶೇಷ ಅನುದಾನ ಮಂಜೂರು ಮಾಡುವ ಬಗ್ಗೆ	ಮಾನ್ಯ ಶಾಸಕರು. ಖಾನಾಪೂರ ವಿಧಾನಸಭಾ ಕ್ಷೇತ್ರ	ರೂ 5000 00 ಲಕ್ಷಗಳು
12	ರಾಮದುರ್ಗ ಪುರಸಭೆ ವ್ಯಾಪ್ತಿಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ವಿಶೇಷ ಅನುದಾನ ಮಂಜೂರು ಮಾಡುವ ಬಗ್ಗೆ	ಮಾನ್ಯ ಶಾಸಕರು. ರಾಮದುರ್ಗ ವಿಧಾನಸಭಾ ಕ್ಷೇತ್ರ	ರೂ 2000.00 ಲಕ್ಷಗಳು
13	ಚನ್ನಮ್ಮನ ಕಿತ್ತೂರು ಪಟ್ಟಣ ಪಂಚಾಯಿತಿ ಹಾಗೂ ಎಂ.ಕೆ.ಹುಬ್ಬಳ್ಳಿ ಪಟ್ಟಣ ಪಂಚಾಯಿತಿ ವ್ಯಾಪ್ತಿಗಳಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ವಿಶೇಷ ಅನುದಾನ ಮಂಜೂರು ಮಾಡುವ ಬಗ್ಗೆ	ಮಾನ್ಯ ಶಾಸಕರು. ಚನ್ನಮ್ಮನ ಕಿತ್ತೂರು ವಿಧಾನಸಭಾ ಕ್ಷೇತ್ರ	ರೂ 2300.00 ಲಕ್ಷಗಳು
14	ಬೀಳಗಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ವಿವಿದ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ವಿಶೇಷ ಅನುದಾನ ಮಂಜೂರು ಮಾಡುವ ಬಗ್ಗೆ	ಮಾನ್ಯ ಶಾಸಕರು. ಬೀಳಗಿ ವಿಧಾನಸಭಾ ಕ್ಷೇತ್ರ	ರೂ 2000 00 ಲಕ್ಷಗಳು.
15	ಬಾದಾಮಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ವಿಶೇಷ ಅನುದಾನ ಮಂಜೂರು ಮಾಡುವ ಬಗ್ಗೆ	-	ರೂ 1000.00 ಲಕ್ಷಗಳು
16	ಮುದ್ದೇಬಿಹಾಳ ಪುರಸಭೆ ವ್ಯಾಪ್ತಿಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ವಿಶೇಷ ಅನುದಾನ ಮಂಜೂರು ಮಾಡುವ ಬಗ್ಗೆ	ಮಾನ್ಯ ಶಾಸಕರು. ಮುದ್ದೇಬಿಹಾಳ ವಿಧಾನಸಭಾ ಕ್ಷೇತ್ರ	ರೂ 150.00 ಲಕ್ಷಗಳು
17	ಬ್ಯಾಡಗಿ ಪುರಸಭೆ ವ್ಯಾಪ್ತಿಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ವಿಶೇಷ ಅನುದಾನ ಮಂಜೂರು ಮಾಡುವ ಬಗ್ಗೆ	-	

ನಿರ್ದೇಶನಾಲಯದಿಂದ ವಿಶೇಷ ಅನುದಾನ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿ ಅನುದಾನ ಬಿಡುಗಡೆಯಾಗದೇ ಹಿಂದಿರುಗಿಸಲಾಗಿರುವ ಪ್ರಸ್ತಾವನೆಗಳ ವಿವರ

1	ಸಿಂಧಗಿ ಪುರಸಭೆ ವ್ಯಾಪ್ತಿಯಲ್ಲಿ ಬೈಪಾಸ್ ರಸ್ತೆ ನಿರ್ಮಿಸಲು ವಿಶೇಷ ಅನುದಾನ ಮಂಜೂರು ಮಾಡಲು ಕೋರಿ	ಮಾನ್ಯ ತೋಟಗಾರಿಕೆ ಸಚಿವರು ಹಾಗೂ ವಿಜಯಪುರ ಜಿಲ್ಲಾ ಉಸ್ತುವಾರಿ ಸಚಿವರು	ರೂ 600.00 ಲಕ್ಷಗಳು
2	ಕುಣಿಗಲ್ ಪುರಸಭೆ ವ್ಯಾಪ್ತಿಯಲ್ಲಿ ಖಾಸಗಿ ಬಸ್ ನಿಲ್ದಾಣ ಅಭಿವೃದ್ಧಿಪಡಿಸಲು ವಿಶೇಷ ಅನುದಾಣ ಮಂಜೂರು ಮಾಡಲು ಕೋರಿ	ಮಾನ್ಯ ಶಾಸಕರು. ಕುಣಿಗಲ್ ವಿಧಾನಸಭಾ ಕ್ಷೇತ್ರ	ರೂ 400.00 ಲಕ್ಷಗಳು
3	ಕೆ.ಆರ್.ಪೇಟೆ ಪುರಸಭೆ ವ್ಯಾಪ್ತಿಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ವಿಶೇಷ ಅನುದಾನ ಮಂಜೂರು ಮಾಡುವ ಬಗ್ಗೆ.	ಮಾನ್ಯ ಪೌರಾಡಳಿತ. ತೋಟಗಾರಿಕೆ ಹಾಗೂ ರೇಷ್ಮೆ ಸಚಿವರು ಮತ್ತು ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರು	ರೂ 5000.00 ಲಕ್ಷಗಳು
4	ಕೆ.ಆರ್.ಪೇಟೆ ಪುರಸಭೆ ವ್ಯಾಪ್ತಿಯ ಆಸ್ತಿ ಸಂಖ್ಯೆ 441ರಲ್ಲಿ ಹೂ. ಹಣ್ಣು. ತರಕಾರಿ ವ್ಯಾಪಾರಿಗಳಿಗೆ ಮಾರುಕಟ್ಟೆ ನಿರ್ಮಿಸಲು ವಿಶೇಷ ಅನುದಾನ ಮಂಜೂರು ಮಾಡುವ ಬಗ್ಗೆ.		ರೂ 112 10 ಲಕ್ಷಗಳು
5	ನವಲಗುಂದ ಪುರಸಭೆ ವ್ಯಾಪ್ತಿಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ವಿಶೇಷ ಅನುದಾನ ಮಂಜೂರು ಮಾಡುವ ಬಗ್ಗೆ	ಮಾನ್ಯ ಶಾಸಕರು. ನವಲಗುಂದ ವಿಧಾನಸಭಾ ಕ್ಷೇತ್ರ	ರೂ 1200.00 ಲಕ್ಷಗಳು

Chief Project Officer
Directorate of Municipal Adminisration

164080

(9)

ಕರ್ನಾಟಕ ಸರ್ಕಾರ

ಸಂಖ್ಯೆ:ನಅಇ 266 ಎಸ್‌ಎಫ್ ಸಿ 2020

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ:04-11-2020.

ಇವರಿಂದ:
ಸರ್ಕಾರದ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ,
ಬೆಂಗಳೂರು.

1882957

ಇವರಿಗೆ,
ನಿರ್ದೇಶಕರು,
ಪೌರಾಡಳಿತ ನಿರ್ದೇಶನಾಲಯ,
ಬೆಂಗಳೂರು.

05 NOV 2020

ಮಾನ್ಯರೇ,

ವಿಷಯ: ಮೈಸೂರು ನಗರದ ಒಳಚರಂಡಿ ವ್ಯವಸ್ಥೆ ಸುಧಾರಣೆಗೆ ಸಂಬಂಧಿಸಿದ ಕಾಮಗಾರಿಗಳಿಗೆ ಎಸ್.ಎಫ್.ಸಿ ವಿಶೇಷ ಅನುದಾನವನ್ನು ಮಂಜೂರು ಮಾಡುವ ಬಗ್ಗೆ.

ಉಲ್ಲೇಖ: ತಮ್ಮ ಪತ್ರ ಸಂಖ್ಯೆ :30411 ಡಿಎಂಎ 1 ಎಂಐಎಸ್ . ಸಿ 2020-21, ದಿನಾಂಕ :03-09-2020.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮೈಸೂರು ಮಹಾನಗರಪಾಲಿಕೆಯ ವ್ಯಾಪ್ತಿಯಲ್ಲಿ ಪ್ರಮುಖವಾಗಿ ಮಳೆ ನೀರು ಹರಿಯುವ ತೆರೆದ ಚರಂಡಿಯಲ್ಲಿ ಅಗತ್ಯ ಸಾಮರ್ಥ್ಯದ ತ್ಯಾಜ್ಯ ನೀರು ಸಾಗಾಣಿಕೆ ಕೊಳವೆ ಮಾರ್ಗಗಳನ್ನು ಅಳವಡಿಸುವ ಕಾಮಗಾರಿಗಳ ಒಟ್ಟು ರೂ.13880.00 ಲಕ್ಷಗಳ ಮೊತ್ತದ ಕ್ರಿಯಾ ಯೋಜನೆಗೆ ಅನುದಾನವನ್ನು ಮಂಜೂರು ಮಾಡುವ ಕುರಿತು ಉಲ್ಲೇಖಿತ ಪತ್ರದಲ್ಲಿ ಸ್ವೀಕೃತವಾಗಿದ್ದ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದೆ.

ಪ್ರಸಕ್ತ ಸಾಲಿನಲ್ಲಿ ಆರ್ಥಿಕ ಕಷ್ಟಕರ ಪರಿಸ್ಥಿತಿಯಿಂದಾಗಿ ಎಸ್.ಎಫ್.ಸಿ ವಿಶೇಷ ಅನುದಾನದಲ್ಲಿ ತೀವ್ರ ಕೊರತೆಯಿರುವ ಹಿನ್ನೆಲೆಯಲ್ಲಿ ಸದರಿ ಪ್ರಸ್ತಾವನೆಯನ್ನು ಪರಿಗಣಿಸಲು ಸಾಧ್ಯವಿಲ್ಲವೆಂದು ತಿಳಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

5/11

ತಮ್ಮ ನಂಬುಗೆಯ,

(ಲಲಿತಾಬಾಯಿ ಕೆ.)
ಸರ್ಕಾರದ ಅಧೀನ ಕಾರ್ಯದರ್ಶಿಗಳು
ನಗರಾಭಿವೃದ್ಧಿ ಇಲಾಖೆ.

Shankar 5/11/2020

4/11

ಪ್ರತಿ ಅಗತ್ಯ ಕ್ರಮಕ್ಕಾಗಿ:
ಆಯುಕ್ತರು, ಮೈಸೂರು ಮಹಾನಗರಪಾಲಿಕೆ, ಮೈಸೂರು.

PO

(120)

ಕರ್ನಾಟಕ ಸರ್ಕಾರ

ಸಂಖ್ಯೆ:ನಅಇ 363 ಎಸ್‌ಎಫ್ ಸಿ 2020

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ:05-12-2020.

ಇವರಿಂದ:
ಸರ್ಕಾರದ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ,
ಬೆಂಗಳೂರು.

2017516
Directorate of Municipal Admin
No
Compliction
07 DEC 2020
HQA / AD. Admin
DMA

ಇವರಿಗೆ,
ನಿರ್ದೇಶಕರು,
ಪೌರಾಡಳಿತ ನಿರ್ದೇಶನಾಲಯ,
ಬೆಂಗಳೂರು.

ಮಾನ್ಯರೇ,

ವಿಷಯ: ಕೆ.ಆರ್. ಪೇಟೆ ಪುರಸಭೆ ವ್ಯಾಪ್ತಿಯಲ್ಲಿ ಪುರಸಭೆಗೆ ಸೇರಿದ ಆಸ್ತಿ ಸಂ.441 ರಲ್ಲಿ ಹೂ ಹಣ್ಣು, ತರಕಾರಿ ವ್ಯಾಪಾರಿಗಳಿಗೆ ರೂ. 112.10 ಲಕ್ಷಗಳ ವಿಶೇಷ ಅನುದಾನವನ್ನು ಮಂಜೂರು ಮಾಡುವ ಬಗ್ಗೆ.

ಉಲ್ಲೇಖ: 1) ಪತ್ರ ಸಂಖ್ಯೆ.30411 ಡಿಎಂಎ 1 ಎಂಐಎಸ್‌ಸಿ 2020-21, ದಿನಾಂಕ: 09-10-2020.
2) ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ:ಆಇ 504 ವೆಚ್ಚ-9/2020, ದಿನಾಂಕ:11-11-2020.

*****

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ, ಉಲ್ಲೇಖಿತ (1)ರ ಪತ್ರದಲ್ಲಿ ಕೆ.ಆರ್ ಪೇಟೆ ಪುರಸಭೆ ವ್ಯಾಪ್ತಿಯಲ್ಲಿ ಹೂ, ಹಣ್ಣು, ತರಕಾರಿ ವ್ಯಾಪಾರಿಗಳಿಗೆ ವ್ಯಾಪಾರ ಮಾರುಕಟ್ಟೆ ನಿರ್ಮಿಸಲು ರೂ.112.10 ಲಕ್ಷಗಳ ಅನುದಾನವನ್ನು 2020-21ನೆ ಸಾಲಿನ ಎಸ್.ಎಫ್.ಸಿ ವಿಶೇಷ ಅನುದಾನದಡಿ ಮಂಜೂರಾತಿ ಮಾಡುವಂತೆ ಕೋರಿರುವುದು ಸರಿಯಷ್ಟೆ.

ಈ ಬಗ್ಗೆ ಪರಿಶೀಲಿಸಲಾಗಿ, ಆರ್ಥಿಕ ಇಲಾಖೆಯು ದಿನಾಂಕ:20-05-2020ರ ಹಿಂಬರಹದಲ್ಲಿ (ಎಫ್.ಡಿ 231 ವೆಚ್ಚ -9/2020) 'ರಾಜ್ಯದಲ್ಲಿ ಕೋವಿಡ್-19 ವೈರಾಣು ಸೋಂಕಿನ ಹಿನ್ನಲೆಯಲ್ಲಿ ನಿರೀಕ್ಷಿತ ಮಟ್ಟದಲ್ಲಿ ರಾಜಸ್ವ ಸಂಗ್ರಹಣೆಯಾಗುತ್ತಿಲ್ಲವಾದ್ದರಿಂದ ಎಸ್.ಎಫ್.ಸಿ ವಿಶೇಷ ಅನುದಾನವನ್ನು ಕೋರಿ ಬರುವ ಈ ತರಹದ ಪ್ರಸ್ತಾವನೆಯನ್ನು ಒಂದು ವರ್ಷ ತಡೆ ಹಿಡಿಯುವಂತೆ' ತಿಳಿಸಿರುವ ಹಿನ್ನೆಲೆಯಲ್ಲಿ, ಸದರಿ ಪ್ರಸ್ತಾವನೆಯನ್ನು ಪ್ರಸಕ್ತ ಸಾಲಿನಲ್ಲಿ ಪರಿಗಣಿಸಲು ಸಾಧ್ಯವಿಲ್ಲವೆಂದು ತಿಳಿಸಿದೆ.

ಮುಂದುವರೆದು, ಇಂತಹ ಪ್ರಸ್ತಾವನೆಗಳಿಗೆ ಆರ್ಥಿಕ ಇಲಾಖೆಯ ಅಭಿಪ್ರಾಯದನ್ವಯ ಕ್ರಮವಹಿಸುವಂತೆ ತಮಗೆ ತಿಳಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

ಲಲಿತಾಬಾಯಿ ಕೆ

(ಲಲಿತಾಬಾಯಿ ಕೆ.)
ಸರ್ಕಾರದ ಅಧೀನ ಕಾರ್ಯದರ್ಶಿಗಳು
ನಗರಾಭಿವೃದ್ಧಿ ಇಲಾಖೆ.

Shankar

ಪ್ರತಿ ಅಗತ್ಯ ಕ್ರಮಕ್ಕಾಗಿ:
ಮುಖ್ಯಾಧಿಕಾರಿಗಳು, ಕೆ.ಆರ್.ಪೇಟೆ ಪುರಸಭೆ, ಮಂಡ್ಯ ಜಿಲ್ಲೆ. 5/12

CPO

(22)

(೨೮)

ಕರ್ನಾಟಕ ಸರ್ಕಾರ

ಸಂಖ್ಯೆ:ನಅಇ 168 ಎಸ್‌ಎಫ್ ಸಿ 2020

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ:30-06-2020.

ಇವರಿಂದ:
ಸರ್ಕಾರದ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ,
ಬೆಂಗಳೂರು.

1526109

02 JUL 2020

ಇವರಿಗೆ,
ನಿರ್ದೇಶಕರು,
ಪೌರಾಡಳಿತ ನಿರ್ದೇಶನಾಲಯ,
ಬೆಂಗಳೂರು.

CPO

ಮಾನ್ಯರೇ,

ವಿಷಯ: ಅನುದಾನ / ವಿಶೇಷ ಅನುದಾನ ಕೋರಿ ಸ್ವೀಕೃತವಾಗಿರುವ ಮನವಿಗಳ ಬಗ್ಗೆ.

ಉಲ್ಲೇಖ: ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ:ಆಇ 231 ವೆಚ್ಚ-9/ 2020, ದಿನಾಂಕ:20-05-2020.

*****

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ, ರಾಜ್ಯದ ಈ ಕೆಳಕಂಡ ವಿವಿಧ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾಮಗಾರಿಗಳಿಗಾಗಿ **ರೂ.**39175.22**ಲಕ್ಷಗಳನ್ನು** ಬಿಡುಗಡೆಗೊಳಿಸುವಂತೆ ಕೋರಿ, ಈ ಕೆಳಕಂಡ ಮನವಿಗಳು ಸ್ವೀಕೃತವಾಗಿರುತ್ತವೆ.

(ರೂ.ಲಕ್ಷಗಳಲ್ಲಿ)

ಕ್ರ. ಸಂ	ಇ-ಸ್ವೀಕೃತಿ ಸಂಖ್ಯೆ ದಿನಾಂಕ	ಮನವಿದಾರರ ಹೆಸರು	ಕೋರಿಕೆಯ ವಿವರ	ಮಾನ್ಯ ಮುಖ್ಯಮಂತ್ರಿಯವರ ಟಿಪ್ಪಣಿ	ಕೋರಿರುವ ಮೊತ್ತ
1.	JDF 1305678, ದಿ:28-04-2020	ಮಾನ್ಯ ಪೌರಾಡಳಿತ ಸಚಿವರು ಮನವಿದಾರರು ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು & ಶಾಸಕರು, ಭದ್ರಾವತಿ	ಭದ್ರಾವತಿ ನಗರ ಮತ್ತು ಗ್ರಾಮಾಂತರ ಪ್ರದೇಶದ ವ್ಯಾಪ್ತಿಯಲ್ಲಿ ಹೈಮಾಕ್ಸ್ ದೀಪಗಳನ್ನು ಅಳವಡಿಸುವ ಬಗ್ಗೆ.		200.00
2.	SWM 1235212, ದಿ:07-03-2020 & 1117864, ದಿ:07-02-2020	ಮಾನ್ಯ ನಗರಾಭಿವೃದ್ಧಿ ಸಚಿವರು ಮನವಿದಾರರು ಶಾಸಕರು, ಮಂಗಳೂರು ನಗರ ದಕ್ಷಿಣ	ಮಹಾನಗರಪಾಲಿಕೆಯ ವ್ಯಾಪ್ತಿಯಲ್ಲಿ ಪಚ್ಚನಾಡಿ ಹಾಗೂ ಕುಡುಪು ಗ್ರಾಮದ ಘನತ್ಯಾಜ್ಯ ಲ್ಯಾಂಡ್‌ಫೀಲ್ ಘಟಕದಲ್ಲಿ ಸಾರ್ವಜನಿಕ ಆಸ್ತಿ ಪಾಸ್ತಿಗಳಿಗೆ ಉಂಟಾದ ಹಾನಿಯ ಪರಿಹಾರಕ್ಕಾಗಿ		14175.22
3.	1307039, ದಿ:29-04-2020 JDF	ಶಾಸಕರು, ಚಿತ್ರದುರ್ಗ	ಚಿತ್ರದುರ್ಗ ನಗರದ ಐತಿಹಾಸಿಕ ಕೋಟೆಗೆ ಸಂಪರ್ಕ ಕಲ್ಪಿಸುವ ವರ್ತುಲ ರಸ್ತೆಯ ನಿರ್ಮಾಣಕ್ಕೆ ಅನುದಾನ		5000.00
4.	1235106, ದಿ:07-03-2020 CPO	ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು & ಸಣ್ಣ ನೀರಾವರಿ ಸಚಿವರು	ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾ|| ಹುಳಿಯಾರು ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಅಭಿವೃದ್ಧಿಪಡಿಸಲು		500.00

5.	1139302 ದಿ:10-02-2020	ಶಾಸಕರು, ಮಂಗಳೂರು ನಗರ ದಕ್ಷಿಣ	ಪ್ರೀಮಿಯಂ ಎಫ್.ಎ.ಆರ್ ನಿಧಿಯಡಿ ಸಂಗ್ರಹವಾಗಿರುವ ಮೊತ್ತವನ್ನು ಘನತ್ಯಾಜ್ಯ ನಿರ್ವಹಣಾ ಬಿಲ್ಲುಗಳು		1200.00
6.	1312429, ದಿ:05-05-2020	ಸಹಕಾರ ಸಚಿವರು & ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರು	ಮೈಸೂರು ನಗರ ವ್ಯಾಪ್ತಿಯಲ್ಲಿ 65 ವಾರ್ಡ್‌ಗಳಲ್ಲಿ ಹಿಂದುಳಿದಿರುವ ಬಡಜನತೆಗೆ ಪ್ರತಿನಿತ್ಯದ ಔಷದೋಪಚಾರ ಮತ್ತು ಇತರ ತುರ್ತು ಸೌಲಭ್ಯ		
7.	1313019, ದಿ:05-05-2020	ಮಾನ್ಯ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ಸಚಿವರು	ಚಿಕ್ಕಮಗಳೂರು ನಗರಸಭೆ ವ್ಯಾಪ್ತಿಯಲ್ಲಿ ರಸ್ತೆಗಳನ್ನು ಅಭಿವೃದ್ಧಿಪಡಿಸಲು		3000.00
8.	1332364, ದಿ:15-05-2020	ಮಾನ್ಯ ಪೌರಾಡಳಿತ ಸಚಿವರು ಮನವಿದಾರರು ಗ್ರಾಮೀಣಾಭಿವೃದ್ಧಿ ಸಚಿವರು	ಭದ್ರಾವತಿ ನಗರಸಭೆ ವ್ಯಾಪ್ತಿಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿ & ಬಸ್ ನಿಲ್ದಾಣ ಕಾಮಗಾರಿಗಾಗಿ		
9.	1336804, ದಿ:18-05-2020	ಮಾನ್ಯ ಪೌರಾಡಳಿತ ಸಚಿವರು ಮನವಿದಾರರು ಶಾಸಕರು, ರಾಮದುರ್ಗ	ರಾಮದುರ್ಗ ಪುರಸಭೆ ವ್ಯಾಪ್ತಿಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು		500.00
10.	1336826, ದಿ:18-05-2020	ಮಾನ್ಯ ಪೌರಾಡಳಿತ ಸಚಿವರು ಮನವಿದಾರರು ಶಾಸಕರು, ಕಂಪ್ಲಿ	ಕುರುಗೋಡು & ಕಂಪ್ಲಿ ಪುರಸಭೆ ವ್ಯಾಪ್ತಿಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು		1000.00
11.	1336884, ದಿ:18-05-2020	ಮಾನ್ಯ ಪೌರಾಡಳಿತ ಸಚಿವರು ಮನವಿದಾರರು ಶಾಸಕರು, ರಾಣೆಬೆನ್ನೂರು	ರಾಣೆಬೆನ್ನೂರು ವ್ಯಾಪ್ತಿಯಲ್ಲಿ ರಸ್ತೆ & ಚರಂಡಿಗಳ ಅಭಿವೃದ್ಧಿಗಾಗಿ		3000.00
12.	1337271, ದಿ:18-05-2020	ಮಾನ್ಯ ಪೌರಾಡಳಿತ ಸಚಿವರು ಮನವಿದಾರರು ಶಾಸಕರು, ಕೋಲಾರ	ಕೋಲಾರ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಮಸ್ಯೆಗಾಗಿ		400.00
13.	1337287 ದಿ:18-05-2020	ಮಾನ್ಯ ಪೌರಾಡಳಿತ ಸಚಿವರು ಮನವಿದಾರರು ಲೋಕಸಭಾ ಸದಸ್ಯರು, ಚಿತ್ರದುರ್ಗ ಲೋಕಸಭಾ ಕ್ಷೇತ್ರ	ಅತ್ತಿಬೆಲೆ ಪುರಸಭೆಗೆ ಹೊಸ ಕಟ್ಟಡ ನಿರ್ಮಾಣಕ್ಕಾಗಿ		500.00
14.	ದಿ:04-05-2020	ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ	ಮೂಡಿಗೆರೆ ಪಟ್ಟಣ ಪಂಚಾಯ್ತಿ ವ್ಯಾಪ್ತಿಯಲ್ಲಿ ಅತಿವೃಷ್ಟಿಯಿಂದ ಹಾನಿಗೊಳಗಾದ ಸ್ಥಳಗಳಲ್ಲಿ ಮೂಲಭೂತ ಸೌಕರ್ಯ ಕಾಮಗಾರಿಗಳನ್ನು ಕೈಗೊಳ್ಳಲು		200.00
15.	1338121, ದಿ:18-05-2020	ಮಾನ್ಯ ಪೌರಾಡಳಿತ ಸಚಿವರು ಮನವಿದಾರರು ಶಾಸಕರು, ದಾಂಡೇಲಿ	ದಾಂಡೇಲಿ ನಗರಸಭೆಗೆ ತಡೆಹಿಡಿಯಲಾದ ಎಸ್.ಎಫ್.ಸಿ ವಿಶೇಷ ಅನುದಾನವನ್ನು ಮರು ಮಂಜೂರು ಮಾಡುವ ಬಗ್ಗೆ		1000.00
16.	1338124, ದಿ:18-05-2020	ಮಾನ್ಯ ಪೌರಾಡಳಿತ ಸಚಿವರು ಮನವಿದಾರರು ಶಾಸಕರು, ಚನ್ನಮ್ಮನ ಕಿತ್ತೂರು	ಕಿತ್ತೂರು ಪಟ್ಟಣ ಪಂಚಾಯ್ತಿ & ಎಂ.ಕೆ ಹುಬ್ಬಳ್ಳಿ ಪಟ್ಟಣ ಪಂಚಾಯ್ತಿಗೆ ಅನುದಾನ		2300.00
17.	1338127, ದಿ:18-05-2020	ಮಾನ್ಯ ಪೌರಾಡಳಿತ ಸಚಿವರು ಮನವಿದಾರರು ಲೋಕಸಭಾ ಸದಸ್ಯರು, ಚಿತ್ರದುರ್ಗ ಲೋಕಸಭಾ ಕ್ಷೇತ್ರ	ಅತ್ತಿಬೆಲೆ ಪುರಸಭೆಯ ಪರಿಶಿಷ್ಟ ಜಾತಿ & ಪರಿಶಿಷ್ಟ ಪಂಗಡದ ವಾರ್ಡ್ ಗಳಿಗೆ ವಿಶೇಷ ಅನುದಾನ		400.00
18.	1338129, ದಿ:18-05-2020	ಮಾನ್ಯ ಪೌರಾಡಳಿತ ಸಚಿವರು ಮನವಿದಾರರು ಶಾಸಕರು, ಬೀಳಗಿ	ಬೀಳಗಿ ಪಟ್ಟಣ ಪಂಚಾಯ್ತಿಯ ವ್ಯಾಪ್ತಿಯಲ್ಲಿ ಮೂಲಭೂತ ಸೌಕರ್ಯ ಕಲ್ಪಿಸಲು		2000.00

19. CPO	1336774, ದಿ:18-05-2020	ಮಾನ್ಯ ಪೌರಾಡಳಿತ ಸಚಿವರು & ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಮನವಿದಾರರು ಕೊಲ್ಲಾ ಶೇಷಗಿರಿರಾವ್, ಪರಾಜಿತ ಅಭ್ಯರ್ಥಿ, ರಾಜ್ಯ ಕಾರ್ಯಕಾರಿಣಿ ಸದಸ್ಯರು, ಸಿಂಧನೂರು, ರಾಯಚೂರು	ಸಿಂಧನೂರು ನಗರಸಭೆ ವ್ಯಾಪ್ತಿಯ ವಾರ್ಡ್‌ಗಳಲ್ಲಿ ಮೂಲಭೂತ ಸೌಕರ್ಯಗಳಾದ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿಗೆ		600.00
20. JDF	1336586, ದಿ:18-05-2020	ಮಾನ್ಯ ಪೌರಾಡಳಿತ ಸಚಿವರು ಮನವಿದಾರರು ಶಾಸಕರು, ತುರುವೇಕೆರೆ, ತುಮಕೂರು	ತುರುವೇಕೆರೆ ಪಟ್ಟಣ ಪಂಚಾಯ್ತಿ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು		300.00
21. CPO	1336573, ದಿ:18-05-2020	ಮಾನ್ಯ ಪೌರಾಡಳಿತ ಸಚಿವರು ಮನವಿದಾರರು ಶಾಸಕರು, ಸಿರುಗುಪ್ಪ, ಬಳ್ಳಾರಿ	ಬಳ್ಳಾರಿ ಜಿಲ್ಲೆ ಸಿರುಗುಪ್ಪ ನಗರದಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು		500.00
22. JDF	1338213 ದಿ:18-5-2020	ಮಾನ್ಯ ಪೌರಾಡಳಿತ ಸಚಿವರು ಮನವಿದಾರರು ಹೆಚ್.ಎಂ. ರೇವಣ್ಣ, ವಿಧಾನ ಪರಿಷತ್ ಸದಸ್ಯರು	ಮಾಗಡಿ ಟೌನ್, ವಾರ್ಡ್ ನಂ.1 & ವಾರ್ಡ್ ನಂ.9ರ ಶ್ರೀ ರಂಗ ಕಾಲೋನಿಯಲ್ಲಿ ಡೆಕ್ ಸ್ಲ್ಯಾಬ್ ವಾಲ್ ನಿರ್ಮಾಣಕ್ಕಾಗಿ		100.00
23. CPO	1338142, ದಿ:18-05-2020	ಮಾನ್ಯ ಪೌರಾಡಳಿತ ಸಚಿವರು ಮನವಿದಾರರು ಬಸವರಾಜ್ ಪಾಟೀಲ್ ಇಟಗಿ, ಸದಸ್ಯರು, ವಿಧಾನಪರಿಷತ್, ರಾಯಚೂರು	ದೇವದುರ್ಗ & ರಾಯಚೂರು ಪಟ್ಟಣಗಳಿಗೆ ಎಸ್.ಸಿ.ಪಿ & ಟಿಎಸ್‌ಪಿ ಯೋಜನೆಯಡಿಯಲ್ಲಿ ಅನುದಾನ		300.00
24. JDF	1338199, ದಿ:18-05-2020	ಮಾನ್ಯ ಪೌರಾಡಳಿತ ಸಚಿವರು ಮನವಿದಾರರು ಶಾಸಕರು, ಕನಕಗಿರಿ	ಕಾರಟಗಿ & ಕನಕಗಿರಿ ನ.ಸ್ಥ. ಸಂಸ್ಥೆಗಳಿಗೆ ಅನುದಾನ		400.00
25. Mussel/CPO	1337218, ದಿ:18-05-2020	ಮಾನ್ಯ ಪೌರಾಡಳಿತ ಸಚಿವರು ಮನವಿದಾರರು ಶಾಸಕರು, ಮಡಿಕೇರಿ	ಕುಶಾಲನಗರ ಪಟ್ಟಣ ಪಂಚಾಯ್ತಿಯ ಕಛೇರಿ ಕಟ್ಟಡಕ್ಕಾಗಿ		500.00
26. CPO	1332337, ದಿ:15-5-2020	ಮಾನ್ಯ ಪೌರಾಡಳಿತ ಸಚಿವರು ಮನವಿದಾರರು ಶಾಸಕರು, ಪಿರಿಯಾಪಟ್ಟಣ	ಪಿರಿಯಾಪಟ್ಟಣ ಪುರಸಭೆ ವ್ಯಾಪ್ತಿಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು		700.00
27.	1337271, ದಿ:18-5-2020	ಮಾನ್ಯ ಪೌರಾಡಳಿತ ಸಚಿವರು ಮನವಿದಾರರು ಶಾಸಕರು, ಕೋಲಾರ	ಕೋಲಾರ ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ ನಿವಾರಣೆಗಾಗಿ		400.00
	S.S/CPO		ಒಟ್ಟು		39175.22

ಎಸ್.ಎಫ್.ಸಿ ವಿಶೇಷ ಅನುದಾನವು ತೀವ್ರ ಕೊರತೆಯಲ್ಲಿರುವುದರಿಂದ ಮೇಲ್ಕಂಡ ಪ್ರಸ್ತಾವನೆಗಳನ್ನು ಒಂದು ವರ್ಷದ ಅವಧಿಗೆ ತಡೆಹಿಡಿಯುವಂತೆ ಆರ್ಥಿಕ ಇಲಾಖೆಯು ಉಲ್ಲೇಖಿತ ಹಿಂಬರಹದಲ್ಲಿ ತಿಳಿಸಿರುತ್ತದೆ. ಸದರಿ ಮಾಹಿತಿಯನ್ನು ತಮಗೆ ತಿಳಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

(ಕೆ.ನಾಗೇಶ್) 30/6/2020
ಸರ್ಕಾರದ ಅಧೀನ ಕಾರ್ಯದರ್ಶಿಗಳು (ಪಿ.ಎಂ.ಸಿ) (ಪ್ರ)
ನಗರಾಭಿವೃದ್ಧಿ ಇಲಾಖೆ.

30/6